**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 824/ 2018**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಶಿವಶರಣಪ್ಪ | ಪ್ರಾ.ಸಾಃ 01 |
| ತಂದೆ ಹೆಸರುಃ | ಸಂಗಣ್ಣ | ಚಾಸಾಃ 03 |
| ವಯಸ್ಸುಃ | 34 ವರ್ಷ | ದಿಃ 31-08-2024 |
| ಉದ್ಯೋಗಃ | ಅಬಕಾರಿ ಪೇದೆ ಯಾದಗಿರಿ ವಲಯ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು ಮಾರ್ಚ್ 2016 ರಿಂದ ಮೇ 2018 ವರೆಗೆ ಯಾದಗಿರಿಯ ಅಬಕಾರಿ DCEIB ಇಲಾಖೆಯಲ್ಲಿ ಅಬಕಾರಿ ರಕ್ಷಕನಾಗಿ ಸೇವೆ ಸಲ್ಲಿಸಿದ್ದೇನೆ.

ದಿನಾಂಕ 09.04.2018 ರಂದು ನಾನು ಚಾಸಾಃ 6 ರವರೊಂದಿಗೆ ಯಾದಗಿರಿ ಪಟ್ಟಣದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಅಲ್ಲಿಪೂರ ಕ್ರಾಸ್ ಹತ್ತಿರ ಯರಗೋಳ ಕಡೆಗೆ ದ್ವಿಚಕ್ರ ವಾಹದಲ್ಲಿ ಅಕ್ರಮ ಮದ್ಯ ಸಾಗಾಟ ನಡೆದಿರುವ ಬಗ್ಗೆ ಚಾಸಾಃ 6 ರವರಿಗೆ ಖಚಿತ ಮಾಹಿತಿ ಬಂದಿರುತ್ತದೆ. ನಾವುಗಳು ಯಾದಗಿರಿ ಹೊರ ವಲಯದಲ್ಲಿನ ಜಿಲ್ಲಾಧಿಕಾರಿಯವರ ಕಚೇರಿ ಮುಂದೆ ಹೋಗಿ ಅಲ್ಲಿ ಇದ್ದ ಚಾಸಾಃ 1 ಮತ್ತು 2 ರವರನ್ನು ಪಂಚರನ್ನಾಗಿ ಬರಮಾಡಿಕೊಂಡಿರುತ್ತೇವೆ. ನಂತರ ಮುದ್ನಾಳ ತಾಂಡಾ ಮೂಲಕ ಅಲ್ಲಿಪೂರ ಕ್ರಾಸ್ ನಿಂದ ಯರಗೋಳ ಕಡೆಗೆ ಹೋಗುವ ರಸ್ತೆಯಲ್ಲಿ ರಸ್ತೆಗಾವಲು ಮಾಡುತ್ತಿರುವಾಗ ಸಾಃ 04.30 ಗಂಟೆಗೆ ಯಾದಗಿರಿ ಕಡೆಯಿಂದ ಒಂದು ದ್ವಿಚಕ್ರ ವಾಹನದಲ್ಲಿ ಒಬ್ಬ ಸವಾರ ಮುಂಬಾಗದಲ್ಲಿ ಚೀಲ ಇಟ್ಟುಕೊಂಡು ಬರುತ್ತಿರುವುದು ಕಂಡುಬಂದಿರುತ್ತದೆ. ಸದರಿ ವಾಹವನ್ನು ನಿಲ್ಲಿಸಿ ಆತತನನ್ನು ವಿಚಾರಿಸಿದಾಗ ಸದರಿ ವ್ಯಕ್ತಿ ಅನುಮಾನಸ್ಪದವಾಗಿ ವರ್ತಿಸುತ್ತಿದ್ದರಿಂದ ಚಾಸಾಃ 6 ರವರು ಸ್ಥಳದಲ್ಲಿ ಶೋಧನಾ ಪತ್ರ ತಯಾರಿಸಿಕೊಂಡು ವಾಹನದ ಮೇಲೆ ಇದ್ದ ಬಿಳಿ ಬಣ್ಣದ ಗೋಣಿ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಮಿಲಿ ಪ್ರಮಾಣದ ಒ.ಸಿ ವಿಸ್ಕಿಯ 48 ಟೆಟ್ರಾ ಪ್ಯಾಕೇಟುಗಳು, 330 ಮಿಲಿಯ ಕೆ.ಎಫ್ ಬಿಯಾರನ 36 ಟಿನ್ ಕ್ಯಾನುಗಳು ಹಾಗೂ

650 ಮಿಲಿಯ ಕೆ.ಎಫ್ ಬಿಯಾರನ 12 ಬಾಟಲಿಗಳು ಇರುವುದು ಕಂಡು ಬಂದಿರುತ್ತದೆ. ದ್ವಿಚಕ್ಕ ವಾಹನ ಕೆಎ-33 ಯು-9030 ನಂಬರಿನ ಹೊಂಡಾ ಶೈನಿ ಆಗಿರುವುದು ಕಂಡುಬಂದಿರುತ್ತದೆ. ಸದರಿ ವ್ಯಕ್ತಿಯನ್ನು ಹೆಸರು ವಿಳಾಸ ಕೇಳಲಾಗಿ ಆತ ತನ್ನ ಹೆಸರು ವೆಂಕಟೇಶ ತಂದೆ ಮರೆಪ್ಪ ಶ್ರೀಗಿರಿ, ಸಾಃ ಶಹಬಾದ್ ರಸ್ತೆ, ಪ್ರಶಾಂತ ನಗರ, ರಾಜಾಪೂರ, ಕಲಬುರಗಿ ಎಂದು ತಿಳಿಸಿರುತ್ತಾನೆ. ಆತ ಮದ್ಯ ಸಾಗಾಟ ಮಾಡಲು ತನ್ನ ಹತ್ತಿರ ಪರವಾನಿಗೆ ಇಲ್ಲ ಎಂದ ತಿಳಿಸಿರುತ್ತಾರೆ. ನಂತರ ಮದ್ಯ ದಾಸ್ತಾನು ಬೈಕ್ ಮತ್ತು ಆರೋಪಿಯನ್ನು ವಶಕ್ಕೆ ಪಡೆದುಕೊಂಡು ದೊರೆತ ಮದ್ಯದ ಪೈಕಿ ಎರಡು ಟೆಟ್ರಾ ಪ್ಯಾಕೇಟು ಒಂದು ಬಿಯಾರ ಟಿನ್ ಕ್ಯಾನ ಮತ್ತು ಒಂದು ಬಿಯಾರ ಬಾಟಲಿಯನ್ನು ಮಾದರಿಯಾಗಿ ತೆಗೆದುಕೊಂಡಿರುತ್ತೇವೆ. ಸ್ಥಳದಲ್ಲಿ ಸಾಃ 4.30 ರಿಂದ 02.20 ಗಂಟೆ ವರೆಗೆ ಪಂಚನಾಮೆ ಜರುಗಿಸಿರುತ್ತೇವೆ. ನಂತರ ಮುದ್ದೆ ಮಾಲು ಮತ್ತು ಆರೋಪಿಯೊಂದಿಗೆ ಕಚೆರಿಗೆ ಬಂದಿದ್ದು, ಚಾಸಾಃ 6 ರವರು ಸರಕಾರದ ಪರವಾಗಿ ದೂರು ದಾಖಲು ಮಾಡಿಕೊಂಡಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಆತ ಅಕರಮ ಮದ್ಯ ಸಾಗಾಟ ಮಾಡುತ್ತಿದ್ದ ವ್ಯಕ್ತಿ ಆಗಿರುತ್ತಾನೆ ಎಂದು ನುಡಿಯುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಎರಡು ಖಾಲಿ ಟೆಟ್ರಾ ಪ್ಯಾಕೇಟು, ಒಂದು ಟೀನ್ ಕ್ಯಾನ್ ಹಾಗೂ ಒಂದು ಬಿಯಾರ ಬಾಟಲಿಯನ್ನು ಅವುಗಳು ಮಾದರಿ ಮದ್ಯದ ಪ್ಯಾಕೆಟು ಮತ್ತು ಬಾಟಲಿಗಳು ಎಂದು ನುಡಿದಿದ್ದು ಅವುಗಳನ್ನು ಮು.ಮಾ 1 ರಿಂದ 4 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಎಂ.ಬಿ.ಪಿ ವಕೀಲರಿಂದಃ</u>

ದಿನಾಂಕ 09.04.2018 ರಂದು ನಾನು, ಚಾಸಾಃ 6 ಮತ್ತು ವಾಹನ ಚಾಲಕ ದೊಂಡಿಬಾ ಜಾದವ ರವರು ಗಸ್ತು ಕರ್ತವ್ಯಕ್ಕೆ ಹೋಗಿದ್ದೆವು. ನಾವು ಸಾಃ 04.00 ಗಂಟೆಗೆ ಠಾಣೆಯಿಂದ ಹೋಗಿದ್ದೆವು. ಯಾದಗಿರಿ-ವಾಡಿ ರಸ್ತೆಯ ಮೂಲಕ ಹೋಗಿದ್ದೆವು. ಯರಗೋಳದಿಂದ 04 ಕಿಮೀ ದೂರದಲ್ಲಿ ನಾವುಗಳು ರಸ್ತೆಗಾಲು ಮಾಡುತ್ತಿದ್ದೆವು. ಯಾದಗಿರಿಯಿಂದ ಯರಗೋಳ ಗ್ರಾಮಕ್ಕೆ ಹೋಗಲು ಅರ್ಧ ಗಂಟೆ ಸಮಯ ಬೇಕಾಗುತ್ತದೆ ಎಂದರೆ ಸರಿ. ನಾವು ಸ್ಥಳಕ್ಕೆ ಹೋದ ತಕ್ಷಣ ವಾಹನ ಬರುತ್ತಿರುವುದು ಕಂಡುಬಂದಿರುತ್ತದೆ. ಸ್ವತಃ ನಾನೇ ಆರೋಪಿಯ ಬೈಕನ್ನು ತಡೆದು ನಿಲ್ಲಿಸಿದ್ದೆನು. ಘಟನೆಯ ದಿನಗಳಲ್ಲಿ ವಿಧಾನಸಬೆ ಚುನಾವಣೆ ಘೋಷಣೆ

ಆಗಿತ್ತು ಎಂದರೆ ಸರಿ. ಸದರಿ ಚುನಾವಣಾ ನೀತಿ ಸಂಹಿತೆ ಅವದಿಯಲ್ಲಿ ನಮ್ಮ ಕಚೇರಿಯಿಂದ ಸುಮಾರು 8-10 ಪ್ರಕರಣ ಪತ್ತೆ ಮಾಡಲಾಗಿದೆ.

ಪಂಚನಾಮೆಯನ್ನು ಚಾಸಾಃ 6 ರವರು ಬರೆದಿರುತ್ತಾರೆ. ಗುನ್ನೆಜಾಗದಲ್ಲಿ ನಾವುಗಳು 50 ನಿಮಿಷದ ವರೆಗೆ ಇದ್ದೆವು. ಗುನ್ನೆಜಾಗದಲ್ಲಿನ ಜನರನ್ನು ಪಂಚರಾಗಿ ಬರುವಂತೆ ನಾವು ಕೇಳಿಕೊಂಡಿದ್ದೆವು, ಆದರೆ ಯಾರು ಸಹಕರಿಸಿರಲಿಲ್ಲ. ನಾನು ಪಂಚನಾಮೆಗೆ ಸಹಿ ಮಾಡಿಲ್ಲ.

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿಯ ಯಾವುದೇ ಘಟನೆ ಆಗಿಲ್ಲ, ಆರೋಪಿ ಮದ್ಯ ಸಾಗಾಟ ಮಾಡಿಲ್ಲ ಹಾಗೂ ನಾವು ಅತನ ಕಡೆಯಿಂದ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಚುನಾವಣೆ ಸಮಯದಲ್ಲಿನ ಇಲಾಖಾ ಅಂಕಿ-ಅಂಶಗಳಿಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಮು.ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ 1 ರಿಂದ 4 ರಂತಹ ವಸ್ತುಗಳು ಮದ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಮದ್ಯ ಇಟ್ಟುಕೊಂಡಿದ್ದ ಗೋಣಿ ಚೀಲವನ್ನು ಸಹ ನಾನು ಜಪ್ತಿ ಮಾಡಿಕೊಂಡಿದ್ದೆವು. ಸದರಿ ಗೋಣಿಚೀಲವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೋ ಇಲ್ಲವೋ ನನಗೆ ಗೊತಿತಲ್ಲ. ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ನನ್ನ ಮೇಲಾಧಿಕಾರಿಯವರ ಮತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**